**ಸಾಕ್ಷಿಗೆ ದಿನಾಂಕಃ05-08-2025 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಪಾಟೀ ಸವಾಲು :: ಪ್ರತಿವಾದಿ ಪರ ಶ್ರೀ.GNC ವಕೀಲರಿಂದ ::**

ನಾನು ಹಿಂದೆ ಅಂದರೆ ಅಂದಾಜು 1986-87 ರಲ್ಲಿ ತರೀಕೆರೆ ಪುರಸಭಾ ಅಧ್ಯಕ್ಷನಾಗಿದ್ದೆ ಎಂದರೆ ಸರಿ. ವಾದಿಯ ತಂದೆಯ ಹೆಸರು ಜಸ್ಟಿಸ್ ಜಿ. ನರೇಂದ್ರ ಆಗಿರುತ್ತದೆ. ನಿರ್ಮಲರವರು ಜಿ. ನರೇಂದ್ರ ರವರ ಪತ್ನಿಯಾಗಿರುತ್ತಾರೆ ಎಂದರೆ ಸರಿ. ದಾವಾ ಆಸ್ತಿಯು ಪ್ರಸ್ತುತದಲ್ಲಿ ದಿವಂಗತ ನಿರ್ಮಲರವರ ಹೆಸರಿನಲ್ಲಿ ಇರುತ್ತದೆ. ಆ ರೀತಿ ಅವರ ಹೆಸರಿನಲ್ಲಿ 2015-16 ಸಾಲಿನಿಂದ ಇರಬಹುದು, ನಿಖರವಾಗಿ ಗೊತ್ತಿಲ್ಲ. ದಾವಾ ಸ್ವತ್ತು ಮೂಲತಃ ಪುರಸಭೆಗೆ ಸಂಬಂಧಪಟ್ಟ ಸ್ವತ್ತಾಗಿರುತ್ತದೆ ಎಂದರೆ ಸರಿಯಲ್ಲ. 1961-62 ನೇ ಸಾಲಿನಲ್ಲಿ Assessment ನಂಬರ್ 1378/1386 ರಡಿಯಲ್ಲಿ ಸರ್ಕಾರಿ ಬಾವಿ ಹಾಗೂ ಜಾಗ ಎಂದು ನಮೂದು ಇರುತ್ತದೆ ಎಂದರೆ ಸರಿಯಲ್ಲ. ಅದರ ವಿಸ್ತೀರ್ಣ 26 x 35 ಅಡಿಗಳಷ್ಟಗಿರುತ್ತದೆ ಎಂದರೆ ಸರಿ. 26 x 35 ಅಡಿ ವಿಸ್ತೀರ್ಣದಲ್ಲಿ 10.5 x 19 ಅಡಿಯಷ್ಟು ಬಾವಿ ಇತ್ತು ಎಂದರೆ ಸಾಕ್ಷಿಯು ಅದು ನಮ್ಮ ಸ್ವಂತ ಬಾವಿ ಆಗಿರುತ್ತದೆ ಎಂದು ನುಡಿಯುತ್ತಾರೆ. ಅದೇ ರೀತಿ 1969-70 ರಲ್ಲಿ Assessment ನಂಬರ್ 1448 ರಡಿಯಲ್ಲಿ ಪುರಸಭಾ ಬಾವಿ ಹಾಗೂ ಖಾಲಿ ಜಾಗ ಎಂದು ನಮೂದು ಇರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಪುಟ್ಟಯ್ಯ ರವರ ಹೆಸರಿನಲ್ಲಿ ಬರುವ ಸಮಯದಲ್ಲಿ ನಾನು ಹುಟ್ಟಿರಲಿಲ್ಲ. ಪುಟ್ಟಯ್ಯ ರವರಿಗೆ ದಾವಾ ಆಸ್ತಿಯು ಯಾವ ಮೂಲದಿಂದ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಖಾತಾ ಬದಲಾವಣೆಗೆ ನಾವು ಪ್ರತಿವಾದಿಯ ಕಚೇರಿಗೆ ಅರ್ಜಿ ನೀಡಿದಾಗ ಸಾರ್ವಜನಿಕರಿಂದ ಅಭ್ಯಂತರ ಬಂದ ಹಿನ್ನೆಲೆಯಲ್ಲಿ ಪ್ರತಿವಾದಿಯು ನಮಗೆ ದಾವಾ ಸ್ವತ್ತಿನ ಮೂಲ ದಾಖಲಾತಿಗಳನ್ನು ಸಲ್ಲಿಸಲು ತಿಳಿಸಿರುತ್ತಾರೆ ಎಂದರೆ ಸಾಕ್ಷಿಯು ನಮ್ಮಲ್ಲಿ ಇದ್ದ ಎಲ್ಲಾ ದಾಖಲಾತಿಗಳನ್ನು ಪುರಸಭೆಗೆ ನಾವು ನೀಡಿರುತ್ತೇವೆ ಎಂದು ನುಡಿಯುತ್ತಾರೆ. ನಾನು ಪುರಸಭಾ ಅಧ್ಯಕ್ಷನಾಗಿದ್ದ ಸಮಯದಲ್ಲಿ ಅಕ್ರಮವಾಗಿ ದಾವಾ ಶೆಡ್ಯೂಲ್ ಸ್ವತ್ತಿನ ಖಾತೆಯನ್ನು ನಮ್ಮವರ ಹೆಸರಿಗೆ ಬದಲಾವಣೆ ಸಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಇವರಗೂ ದಾವಾ ಆಸ್ತಿಯ ಮೂಲ ದಾಖಲಾತಿಗಳನ್ನು ಪುರಸಭೆಗೆ ನಾವು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಶೆಡ್ಯೂಲ್ ಸ್ವತ್ತಿನ ಖಾತೆಯನ್ನು ಅಕ್ರಮವಾಗಿ ಬದಲಾಯಿಸಿಕೊಂಡು ಪುರಸಭೆ ರಸ್ತೆಯನ್ನು ಒತ್ತುವರಿ ಮಾಡಿಕೊಂಡು ಶೆಡ್ ಅನ್ನು ಸಹ ಅಕ್ರಮವಾಗಿ ನಿರ್ಮಾಣ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಪುರಸಭೆಯಿಂದ ನಮಗೆ ಅಕ್ರಮವಾಗಿ ರಸ್ತೆಯನ್ನು ಒತ್ತುವರಿ ಮಾಡಿರುವ ಬಗ್ಗೆ ನೋಟೀಸ್ ಅನ್ನು ನೀಡಲಾಗಿರುತ್ತದೆ ಎಂದರೆ ಸರಿಯಲ್ಲ. ನಂತರ ಜಿಲ್ಲಾಧಿಕಾರಿಗಳ ಮುಂದೆ ಆದ ಪ್ರಕರಣದಲ್ಲಿ ನಮ್ಮ ಪರವಾಗಿ ಆದೇಶ ಆಗಿರುತ್ತದೆ. ಸದರಿ ಆದೇಶವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇವೆ. ಜಿಲ್ಲಾಧಿಕಾರಿಗಳು ನಮ್ಮ ಪರವಾಗಿ ಯಾವುದೇ ಆದೇಶವನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿಯ ಖಾತೆಯು ಹಾಲಿ ದಿವಂಗತ ನಿರ್ಮಲ ರವರ ಹೆಸರಿನಲ್ಲಿ ಇರುತ್ತದೆ. ದಾವಾ ಆಸ್ತಿಗೆ ಸಂಬಂಧಪಟ್ಟ ಮೂಲ ದಾಖಲೆಗಳು ನಮ್ಮ ಬಳಿ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು ನಮ್ಮ ಹಸೆರಿನಲ್ಲಿ ಖಾತೆಯನ್ನು ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಪುಟ್ಟಯ್ಯ ರವರಿಗೆ ಯಾವ ಮೂಲದಿಂದ ದಾವಾ ಆಸ್ತಿ ಬಂದಿರುತ್ತದೆ ಎಂದು ತೋರಿಸಲು ನನ್ನ ಬಳಿ ದಾಖಲಾತಿಗಳು ಇರುವುದಿಲ್ಲ. ದಾವಾ ಆಸ್ತಿಯ ಸ್ವಾಧೀನದಲ್ಲಿ ನಾವು ಇರುವುದಿಲ್ಲ ಆದಕಾರಣ ಈ ದಾವೆಯಲ್ಲಿ ಯಾವುದೇ ಪರಿಹಾರವನ್ನು ಪಡೆಯಲು ಅರ್ಹರಾಗಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯು ಕಾನೂನು ಬದ್ದವಾಗಿಯೇ ದಾವಾ ಆಸ್ತಿಯಿಂದ ನಮ್ಮನ್ನು ತೆರವುಗೊಳಿಸಲು ಪ್ರಯತ್ನಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅದಕ್ಕೆ ಸಂಬಂಧಪಟ್ಟಂತೆ ಮಾನ್ಯ ಉಚ್ಚ ನ್ಯಾಯಾಲಯದಿಂದ ಆದೇಶಿವಾಗಿರುತ್ತದೆ, ಆದ್ದರಿಂದ ಆ ರೀತಿ ಪ್ರತಿವಾದಿ ಮಾಡಲು ಬರುವುದಿಲ್ಲ ಎಂದು ನುಡಿಯುತ್ತಾರೆ.

**:: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಓ

sd/-

ಸಿ.ಜೆ ಮತ್ತು ಹೆ. ಜೆ.ಎಂ.ಎಫ್.ಸಿ ನ್ಯಾಃ

ತರೀಕೆರೆ.

ಸಾಕ್ಷಿಯ ಸಹಿ: